ದಿನಾಂಕ : 16-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ದೋಷಾರೋಪಣೆ ಮಾಡುವ ಪೂರ್ವದಲ್ಲಿ ಸಾಕ್ಷಿದಾರರು ಪಿಡಬ್ಲ್ಯು-1 ಎಂದು ವಿಚಾರಣೆಯನ್ನು ನೀಡಿದ್ದು ಅದೇ ವಿಚಾರಣೆಯನ್ನು ಈಗ ಮುಖ್ಯ ವಿಚಾರಣೆಯಾಗಿ ಪರಿಗಣಿಸುವಂತೆ ಸರ್ಕಾರಿ ಅಭಿಯೋಜಕರು ಮನವಿಯನ್ನು ಮಾಡಿದ್ದು, ಸದರಿ ಮನವಿಯನ್ನು ಪರಿಗಣಿಸಿ, ಪಾಟೀ ಸವಾಲಿಗಾಗಿ ಮುಂದೂಡಲಾಯಿತು .

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿ. ಎ. ಪಿ. ವಕೀಲರಿಂದ ಃ**

ನಾನು ಐ.ಟಿ.ಐ. ವರೆಗೆ ಓದಿದ್ದೇನೆ. ನನಗೆ ಕನ್ನಡ, ಆಂಗ್ಲ ಭಾಷ್ಷೆ ಓದಲು, ಬರೆಯಲು ಬರುತ್ತದೆ. ನಾನು ಕಿಡಗೇಡಿ ಗ್ರಾಮದ ತೋಟದ ಮನೆಯಲ್ಲಿ ವಾಸವಾಗಿದ್ದೇನೆ. ನಾನು, ನನ್ನ ಅಣ್ಣಂದಿರು ಒಂದೇ ಮನೆಯಲ್ಲಿ ವಾಸವಾಗಿದ್ದೇವೆ. ನಾನು ಮೋಟಾರ ವೈಂಡಿಗ್ ಮತ್ತು ವ್ಯವಸಾಯ ಮಾಡುತ್ತೇನೆ. ನನಗೆ ಸುತ್ತ ಮುತ್ತ ಗ್ರಾಮದವರ ಪರಿಚಯ ಇರುತ್ತದೆ. ನಾನು ಮೊಬೈಲ್ ಬಳಸುತ್ತೇನೆ.

2. ನನ್ನ ಸಹೋದರ ಅನೀಲ ಕೆಂಪವಾಡದಲ್ಲಿ ಇರುವುದಿಲ್ಲ , ಕಿಡಗೇಡಿಯ ತೋಟದ ಮನೆಯಲ್ಲಿ ವಾಸವಾಗಿದ್ದಾನೆ. 2012 ರಲ್ಲಿ ಘಟನೆ ನಡೆಯಿತು ಎನ್ನಲಾದ ಸಮಯದಲ್ಲಿ ಸಹ ಅನೀಲ ನಮ್ಮೊಂದಿಗೆ ತೋಟದ ಮನೆಯಲ್ಲಿ ವಾಸವಾಗಿದ್ದನು.

3. ನಾವು ವಾಸ ಇರುವ ತೋಟದ ಮನೆಯ ಸರ್ವೇ ನಂಬರ 98 ಇರಬಹುದು ನನಗೆ ಸರಿಯಾಗಿ ನೆನಪಿಲ್ಲ. ಸದರಿ ತೋಟವು ಈ ಹಿಂದೆ ನಮ್ಮ ತಂದೆಯ ಹೆಸರಿನಲ್ಲಿ ಇದ್ದು, ಅವರು ತೀರಿಕೊಂಡ ನಂತರ ನಾವು ನಮ್ಮ ಹೆಸರಿಗೆ ದಾಖಲೆಗಳನ್ನು ಮಾಡಿಕೊಂಡಿದ್ದೇವೆ. ನಮ್ಮ ತಂದೆಗೆ ಒಬ್ಬ ತಮ್ಮ ಮತ್ತು ಒಬ್ಬ ತಂಗಿ ಇರುತ್ತಾರೆ. ಗುಂಡು

ದವಡು ಶೇರಖಾನೆ ಎನ್ನುವವರು ನನ್ನ ಚಿಕ್ಕಪ್ಪ.

4. ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಸರ್ವೇ ನಂಬರ 61 ರಲ್ಲಿ ಜಮೀನು ಇದೆ ಎನ್ನುವುದು ಸರಿ. ಸದರಿ ಜಮೀನನ್ನು ನನ್ನ ಚಿಕ್ಕಪ್ಪ ಎಮ್. ಎಲ್.ಎ. ಶ್ರೀಮಂತ ಪಾಟೀಲ ರವರಿಗೆ ಮಾರಾಟ ಮಾಡಿರುತ್ತಾನೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ ತೀರಿಕೊಂಡ ನಂತರ ಜಮೀನಿನಲ್ಲಿ ಪಾಲು ಬರಬೇಕು ಎಂದು ನಾನು ಮತ್ತು ನನ್ನ ಅಣ್ಣ ತಮ್ಮಂದಿರು ನನ್ನ ಚಿಕ್ಕಪ್ಪನ ಮಕ್ಕಳ ಮೇಲೆ ಸಿವಿಲ್ ದಾವೆ ಮಾಡಿದ್ದೇವೆ. ಸರ್ವೇ ನಂಬರ 61 ರ ಜಮೀನಿನ ದಾಖಲೆಗಳನ್ನು ರಾಜಕೀಯ ಗುಂಡುಗಳು ಸೇರಿ ಎಮ್. ಎಲ್.ಎ. ಶ್ರೀಮಂತ ಪಾಟೀಲ ರವರ ಹೆಸರಿನಲ್ಲಿ ಮಾಡಿದ್ದು , ಸ್ವಾಧೀನದಲ್ಲಿ ಸಹ ಇರುತ್ತಾರೆ.

5. ಕೆಂಪವಾಡ ಗ್ರಾಮದಲ್ಲಿ ನನ್ನ ತಮ್ಮ ಅನೀಲ ಗ್ರಾಮ ಪಂಚಾಯತಿಗೆ ಸೇರಿದ್ದ ರಸ್ತೆ ಜಾಗದಲ್ಲಿ ಶೇಡ್ ನ್ನು ಕಟ್ಟಿದ್ದಾನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಪೂರ್ವಜರಿಗೆ ಸೇರಿದ ಜಾಗದಲ್ಲಿ ಶೇಡ್ ಕಟ್ಟಲಾಗಿದೆ ಎಂದು ಹೇಳಿದ್ದಾರೆ. ಸದರಿ ಜಮೀನಿನ ಸರ್ವೇ ನಂಬರ ಮತ್ತು ವಿಸ್ತೀರ್ಣ ನನಗೆ ಈಗ ಹೇಳಲು ಬರುವುದಿಲ್ಲ. ಈ ಹಿಂದೆ ಸದರಿ ಜಮೀನು ದಾಖಲೆ ನಮ್ಮ ತಂದೆ ಹೆಸರಿನಲ್ಲಿ ಇದ್ದು ಈಗ ನಾವು ದಾಖಲೆಗಳನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೇವೆ. ಅದರಲ್ಲಿ ನನ್ನ ಹೆಸರು ಸಹ ಇದೆ.

6. ಕೆಂಪವಾಡ ಗ್ರಾಮದ ಸರ್ವೇ ನಂಬರ 385/ಅ ಜಮೀನಿನಲ್ಲಿ ನನ್ನ ಅಣ್ಣ ಅನೀಲ ಶೇಡ್ ಕಟ್ಟಿದ್ದು ಅದು ಸಾರ್ವಜನಿಕರಿಗೆ ರಸ್ತೆಗಾಗಿ ಬಿಟ್ಟ ಜಾಗ ಎನ್ನುವುದು ಸರಿಯಲ್ಲ. ಆ ರೀತಿ ಮನೆ ಕಟ್ಟಿದ್ದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುತ್ತಿದ್ದರಿಂದ ಸದರಿ ಶೇಡ್ ತೆರವುಗೊಳಿಸುವಂತೆ ಸಾರ್ವಜನಿಕರು ಗ್ರಾಮ ಪಂಚಾಯತಿಗೆ ಮನವಿ ಮಾಡಿದ್ದು, ಪಂಚಾಯತಿಯವರು ಶೇಡ್ ನ್ನು ತೆರವೂ ಗೊಳಿಸುವಂತೆ ನೋಟೀಸ ನೀಡಿದ್ದರು ಎನ್ನುವುದು ಸರಿಯಲ್ಲ. ನನ್ನ ಅಣ್ಣ ಸದರಿ ನೋಟೀಸಿಗೆ ಉತ್ತರ ಕೊಟ್ಟಿರುವುದಿಲ್ಲ ಮತ್ತು ಶೇಡ್ ನ್ನು ತೆರವು ಗೊಳಿಸಿರುವುದಿಲ್ಲ ಎನ್ನುವುದು ನನಗೆ

ಗೊತ್ತಿಲ್ಲ. ಆ ವಿಚಾರವಾಗಿ ಪಂಚಾಯತಿಯವರು ಎ. ಸಿ., ತಹಶೀಲ್ದಾರ , ಜಿಲ್ಲಾ ಅಧಿಕಾರಿ ರವರಿಗೆ ಅರ್ಜಿ ನೀಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ಕೂಡಗೋಲು, ಕೊಡ್ಲಿ , ಸಲಿಕೆ, ಕುರಪಿ, ಗುದ್ದಲಿ, ಕೊಯತಾ ಇವುಗಳು ಬೇರೆ ಬೇರೆ ಎನ್ನುವುದು ಸರಿ.

8. ಖಾಸಗಿ ದೂರನ್ನು ಸಲ್ಲಿಸಲು ವಕೀಲರಿಗೆ ಮಾಹಿತಿ ಕೊಡಲು ನಾನು ನನ್ನ ಅಣ್ಣನೊಂದಿಗೆ ವಕೀಲರ ಕಚೇರಿಗೆ ಹೋಗಿದ್ದೇನು. ಡಿ. ಡಿ. ಶೇರಖಾನೆ ವಕೀಲರು ನನ್ನ ತಮ್ಮ ಎನ್ನುವುದು ಸರಿ. ವಕೀಲರಿಗೆ ಮಾಹಿತಿ ಕೊಡುವ ಸಮಯದಲ್ಲಿ ಆರೋಪಿತರು ಕೊಯತಾ ತಂದಿದ್ದರು ಎಂದು ಮಾಹಿತಿ ಕೊಟ್ಟಿದ್ದೀರಾ ಎನ್ನುವುದಕ್ಕೆ ಸಾಕ್ಷಿಯು ಕೊಯತಾ ಜೊತೆಗೆ ಕೊಡ್ಲಿ, ಕಬ್ಬಿಣದ ರಾಡ್ ನ್ನು, ಬಡಿಗೆಯನ್ನು ಸಹ ತಂದಿದ್ದರು ಎಂದು ಮಾಹಿತಿ ನೀಡಿದ್ದೇನೆ.

9. ನಾವು ವಾಸಇರುವ ತೋಟದ ಮನೆಯ ಅಕ್ಕ ಪಕ್ಕದಲ್ಲಿ ಬೇರೆ ಬೇರೆ ವಾಸದ ಮನೆಗಳು ಇವೆ ಮತ್ತು ಅದರಲ್ಲಿ ಜನರು ವಾಸ ಮಾಡುತ್ತಾರೆ. ಸಾಕ್ಷಿ ಮುಂದುವರೆದು ಸುಮಾರು ದೂರದಲ್ಲಿ ಮನೆಗಳು ಇವೆ ಎಂದು ಹೇಳಿದ್ದಾರೆ. ಅಲ್ಲಿ ಗಲಾಟೆ ಶಬ್ದ ಅಥವಾ ಜೋರಾಗಿ ಚೀರಾಡಿದ ಶಬ್ದ ಕೇಳಿಸುತ್ತದೆಯೇ ಎನ್ನುವುದಕ್ಕೆ ಸಾಕ್ಷಿಯು ದೂರ ಇರುವುದರಿಂದ ಕೇಳಿಸುವುದಿಲ್ಲ ಎಂದು ಹೇಳಿದ್ದಾರೆ . ನಮ್ಮ ಮನೆಯ ಮುಂದೆ ಜನರು ಓಡಾಡುವುದಿಲ್ಲ. ನಮ್ಮ ಜಮೀನಿನ ಅಕ್ಕ ಪಕ್ಕದಲ್ಲಿ ಬೇರೆಯವರ ಜಮೀನುಗಳು ಇವೆ ಎನ್ನುವುದಕ್ಕೆ ಸಾಕ್ಷಿಯು ದೂರದಲ್ಲಿ ಇವೆ ಎಂದು ಹೇಳಿದ್ದಾರೆ. ಬೇರೆ ಬೇರೆ ಜಮೀನುಗಳಿಗೆ ಕೆಲಸದವರು ಬಂದು ಹೋಗುತ್ತಾರೆ ಎನ್ನುವುದು ಸರಿ. ಗಲಾಟೆ ಸುಮಾರು ಅರ್ಧ ಗಂಟೆ ಆಗಿರುತ್ತದೆ. ಅಕ್ಕ ಪಕ್ಕದವರು ಜಗಳ ಬಿಡಿಸಲು ಯಾರು ಬಂದಿರುವುದಿಲ್ಲ.

10. ಘಟನೆ ಆಯಿತು ಎನ್ನುವ ಸಮಯದಲ್ಲಿ ನನ್ನ ಮದುವೆ ಆಗಿರುದಿಲ್ಲ ಆದರೇ ನನ್ನ ಅಣ್ಣಂದಿರ ಮದುವೆ ಆಗಿತ್ತು. ನನ್ನ ಅಣ್ಣಂದಿರ ಹೆಂಡತಿಯರು ಮಕ್ಕಳು ಒಟ್ಟಿಗೆ ವಾಸವಾಗಿದ್ದರು.

11. ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ನಮ್ಮ ಮೇಲೆ ಗಲಾಟೆ ಮಾಡಿದ್ದರು, ಹಲ್ಲೆ ಮಾಡಿದ್ದರು, ಜಾತಿ ಹೆಸರು ತೆಗೆದು ಬೈದರು, ಜಾತಿ ನಿಂದನೆ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ರೀತಿ ಯಾವುದೇ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ. ನಮ್ಮ ತಾಯಿಯ ಸೀರೆ ಹಿಡಿದು ಜಗ್ಗಾಡಿ , ಅವಮಾನ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ತಂಗಿ ಶೋಭಾ ಬಂದು ಜಗಳ ಬಿಡಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ಯಾವುದೇ ಸಮಯದಲ್ಲಿ ನಮ್ಮ ಮನೆಯ ಹತ್ತಿರ ಬಾರದೇ ಇದ್ದರೂ ಸಹ ನಾನು ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.